# ಬಸವರಾಜ ಹೊರಟ್ಟಿಯವರಂಥ ರಾಜಕಾರಣಿಗಳು ನಾಡಿಗೆ ಬೇಕು : ಅಭಿನವ ಗವಿಸಿದ್ಧೇಶ್ವರರು

ಗದಗ, 28. ಇಂದಿನ ದಿನಗಳಲ್ಲಿ ರಾಜಕಾರಣ ಬಹಳಷ್ಟು ಕಲುಷಿತವಾಗಿದೆ ಎಂದು ಎಲ್ಲರೂ ಹೇಳುತ್ತಾರೆ. ಹಾಗಾದರೆ ಅದನ್ನು ಸರಿಪಡಿಸುವವರಾರು? ಅದಕ್ಕೆ ಬಸವರಾಜ ಹೊರಟ್ಟಿಯಂಥವರು ನಮಗೆ ಆಶಾದೀಪವಾಗಿ ಕಾಣುತ್ತಾರೆ. ಇಂದಿನ ರಾಜಕಾರಣದಲ್ಲಿ ಬಸವರಾಜ ಹೊರಟ್ಟಿಯಂಥವರ ಪ್ರಾಮಾಣಿಕ ರಾಜಕಾರಣಿಗಳ ಹೆಚ್ಚಳ ಆಗಬೇಕಿದೆ ಎಂದು ಕೊಪ್ಪಳ ಗವಿಮಠದ ಅಭಿನವ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮಿಗಳವರು ಹೇಳಿದರು.



ಈಚೆಗೆ ಗವಿಮಠಕ್ಕೆ ಭೇಟಿ ನೀಡಿದ್ದ ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರನ್ನು ಆತ್ಮೀಯವಾಗಿ ಸನ್ಮಾನಿಸಿ ಶ್ರೀಗಳವರು ಆಶೀರ್ವಚನ ನೀಡಿ ತಮ್ಮ ಲವಲವಿಕೆ, ಕ್ರಿಯಾಶೀಲತೆಯ ಗುಟ್ಟೇನು. ಸದಾ ತಮ್ಮ ಮುಖದಲ್ಲಿ ಸದಾ ತೇಜಸ್ಸು ನಗು ಇರುತ್ತದೆ. ತಮ್ಮ ವಯಸ್ಸೆಷ್ಟು ಎಂದು ವಿಚಾರಿಸಿದರು. ಜೊತೆಗೆ ತಾವು ತಮ್ಮ ಊರಲ್ಲಿ ಸರಕಾರಿ ಶಾಲೆಯೊಂದನ್ನು ದತ್ತು ಪಡೆದು ದೇಶದಲ್ಲಿಯೇ ಮಾದರಿಯಾದ ಶಾಲೆಯನ್ನು ಕಟ್ಟಿದ ವಿಷಯವನ್ನು ಸಚಿವರಾದ ಗೋವಿಂದ ಕಾರಜೋಳ ಅವರು ಶಾಲೆಯ ವಿಷಯವಾಗಿ ಹೇಳಿದ್ದನ್ನು ಕೇಳಿ ಬಹಳಷ್ಟು ಖುಷಿಯಾಯಿತು. ನಿಮ್ಮ ರೀತಿಯೇ ಪ್ರತಿಯೊಬ್ಬ ಶಾಸಕರು ತಮ್ಮ ಊರಿಗೆ ಒಂದು ಮಾದರಿ ಶಾಲೆಯನ್ನು ಕಟ್ಟಿದರೆ ಕನ್ನಡ ಮಾಧ್ಯಮ ಶಾಲೆಗಳು ಮುಚ್ಚುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ತಾವೊಬ್ಬ ಜನಪ್ರತಿನಿಧಿಗಳಿಗೆ ಮಾದರಿಯಾಗಿದ್ದೀರಿ ತಾವು ಹಾಕಿದ ಹೆಜ್ಜೆಯಲ್ಲಿಯೇ ಇನ್ನಿತರ ಜನಪ್ರತಿನಿಧಿಗಳು ಹೆಜ್ಜೆ ಹಾಕುವಂತಾಗಲಿ ಎಂದು ಆಶಿಸಿದರು.

ನಾನು ಕಂಡಂತೆ ಹೊರಟ್ಟಿಯವರು ಎಂದಿಗೂ ಶಿಕ್ಷಕರ ಕೈ ಬಿಟ್ಟಿಲ್ಲ. ಅದಕ್ಕೆ ಪರ್ಯಾಯವಾಗಿ ಹೊರಟ್ಟಿಯವರೂ ಸಹ ಶಿಕ್ಷಕರ ಕೈ ಬಿಟ್ಟಿಲ್ಲ. ಒಬ್ಬ ವ್ಯಕ್ತಿ ಸತತ ಎಂಟು ಬಾರಿ ವಿಧಾನ ಪರಿಷತ್ತಿಗೆ ಆಯ್ಕೆಯಾಗುವುದು ಸಾಮಾನ್ಯದ ಮಾತಲ್ಲ. ಶಿಕ್ಷಕರ ಬಗ್ಗೆ ಹೊರಟ್ಟಿಯವರು ಇರಿಸಿಕೊಂಡಿರುವ ಪ್ರೀತಿಯೆ ಅವರನ್ನು ಇಲ್ಲಿಯವರೆಗೆ ಕರೆ ತಂದು ನಿಲ್ಲಿಸಿದೆ ಎಂದು ಶ್ರೀಗಳವರು ಹೇಳಿದರು.

ಹೊರಟ್ಟಿಯವರಿಗೆ ತಮ್ಮ ತಾಯಿ ಗುರಮ್ಮನವರ ಬಗ್ಗೆ ಇನ್ನಿಲ್ಲದ ಪ್ರೀತಿ. ಅದಕ್ಕೆಂದೇ ಅವರು ಅವ್ವ ಸೇವಾ ಟ್ರಸ್ಟನ್ನು ಸ್ಥಾಪಿಸಿ ಆ ಮೂಲಕ ವಿವಿಧ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅವರೊಂದಿಗೆ ಅವರ ಶ್ರೀಮತಿಯವರಾದ ಹೇಮಲತಾ ಹೊರಟ್ಟಿಯವರು ಮತ್ತು ಅವ್ವ ಸೇವಾ ಟ್ರಸ್ಟಿನ ಸರ್ವ ಸದಸ್ಯರುಗಳೂ ಸಹ ಕೈಜೋಡಿಸಿ ಕಾರ್ಯ ನಿರ್ವಹಿಸುತ್ತಿರುವುದು ಎಲ್ಲರೂ ಶ್ಲಾಘಿಸಬೇಕಾದ ಸಂಗತಿ ಎಂದು ಶ್ರೀಗಳು ತಿಳಿಸಿದರು.

ಮೂರು ಬಾರಿ ವಿಧಾನ ಪರಿಷತ್ತಿನ ಸಭಾಪತಿಯಾಗಿ ಹೊರಟ್ಟಿಯವರು ಆಯ್ಕೆಗೊಂಡಿರುವದು ಸಂತಸದ ಸಂಗತಿ. ಪ್ರತಿ ಬಾರಿಯೂ ಅವರು ಸದನವನ್ನು ನಡೆಸಿದ ರೀತಿ ಎಲ್ಲರಿಗೂ ಮಾದರಿ. ಅದ್ದರಿಂದಲೆ ಅವರನ್ನು ಎಲ್ಲ ಶಾಸಕರ ಹೆಡ್‌ಮಾಸ್ಟರ್ ಎಂದು ಹೇಳಬಹುದು. ಒಂದು ಶಾಲೆಯ ಹೆಡ್‌ಮಾಸ್ಟರ ಹೇಗಿರುತ್ತಾರೋ ಆ ಶಾಲೆಯೂ ಹಾಗೆಯೇ ಇರುತ್ತದೆ ಎನ್ನುವ ಮಾತು ಜನಜನಿತ. ಅದ್ದರಿಂದ ಹೊರಟ್ಟಿಯವರ ನೇತೃತ್ವದಲ್ಲಿ ವಿಧಾನ ಪರಿಷತ್ತು ಉತ್ತಮ ಕಾರ್ಯಗಳನ್ನು ಮಾಡುತ್ತದೆ ಎಂಬ ಆಶಾ ಭಾವನೆ ತಮ್ಮಲ್ಲಿದೆ ಎಂದು ಶ್ರೀಗಳವರು ತಿಳಿಸಿ, ಗವಿಸಿದ್ಧೇಶನ ಆಶೀರ್ವಾದ ಸದಾ ಹೊರಟ್ಟಿಯವರು ಮತ್ತು ಅವರ ಕುಟುಂಬದವರ ಮೇಲಿದೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಹೊರಟ್ಟಿಯವರು ಇಂದಿನ ದಿನಮಾನಗಳಲ್ಲಿ ನಾವು ಭರವಸೆ ಇಡುವ ಸ್ವಾಮೀಜಿಗಳಲ್ಲಿ ಕೊಪ್ಪಳದ ಅಭಿನವ ಗವಿಸಿದ್ಧೇಶ್ವರರೂ ಒಬ್ಬರು. ಅವರ ಪ್ರವಚನಗಳು ಎಂದಿಗೂ ಭಕ್ತರ ಪಾಲಿಗೆ ದಾರಿದೀಪವಾಗಿವೆ. ಅವರನ್ನು ಭಕ್ತರು ನಿಜಕ್ಕೂ ನಡೆದಾಡುವ ದೇವರೆಂದೇ ತಿಳಿದಿದ್ದಾರೆ. ಇಂತಹ ಶ್ರೀಗಳಿರುವುದರಿಂದಲೆ ಸಮಾಜದಲ್ಲಿ ನೈತಿಕ ಮೌಲ್ಯಗಳು ಹೆಚ್ಚಾಗಲು ಕಾರಣ. ಶ್ರೀಗಳು ಎಂದಿಗೂ ಈ ಸಮಾಜಕ್ಕೆ ಆಶೀರ್ವಾದ ಮಾಡುತ್ತ, ಮಾರ್ಗದರ್ಶನ ಮಾಡುತ್ತಿರಲಿ ಎಂದರು.

ಈ ಸಂದರ್ಭದಲ್ಲಿ ಅವ್ವ ಸೇವಾ ಟ್ರಸ್ಟಿನ ಸಂಚಾಲಕ ಡಾ. ಬಸವರಾಜ ಧಾರವಾಡ, ಮಾಜಿ ನಗರಸಭಾ ಸದಸ್ಯ ಪ್ರಾಣೇಶ ಮಾದಿಗನೂರ ಸೇರಿದಂತೆ ಶ್ರೀಮಠದ ಅನೇಕ ಭಕ್ತರು ಉಪಸ್ಥಿತರಿದ್ದರು.



ಶ್ರೀ ಕ್ಷೇತ್ರ ಮಂತ್ರಾಲಯದ ವತಿಯಿಂದ ಸಾಧಕರಿಗೆ ನೀಡುವ ಅತ್ಯಂತ ಪ್ರತಿಷ್ಠಿತವಾದ 2022–23ನೇ ಸಾಲಿನ ಶ್ರೀ ಮಂತ್ರಾಲಯಂ ಪರಿಮಳ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿದ ನಂತರ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಸಕ್ಕರೆ ಹಾಗೂ ಜವಳಿ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶಂಕರಪಾಟೀಲ ಮುನೇನಕೊಪ್ಪ ಕುಟುಂಬ ಗುರುರಾಘವೇಂದ್ರ ಸನ್ನಿಧಿಗೆ ಆಗಮಿಸಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಅವ್ವ ಸೇವಾ ಟ್ರಸ್ಟನ ಸಂಚಾಲಕರಾದ ಡಾ. ಬಸವರಾಜ ಧಾರವಾಡ, ಕೊಪ್ಪಳ ನಗರಸಭಾ ಮಾಜಿ ಸದಸ್ಯರಾದ ಪ್ರಾಣೇಶ ಮಾದಿಗನೂರ ಮುಂತಾದವರು ಉಪಸ್ಥಿತರಿದ್ದರು.




ಶ್ರೀ ಕ್ಷೇತ್ರ ಮಂತ್ರಾಲಯದ ವತಿಯಿಂದ ಸಾಧಕರಿಗೆ ನೀಡುವ ಅತ್ಯಂತ ಪ್ರತಿಷ್ಠಿತವಾದ 2022–23ನೇ ಸಾಲಿನ ಶ್ರೀ ಮಂತ್ರಾಲಯಂ ಪರಿಮಳ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವ್ವ ಸೇವಾ ಟ್ರಸ್ಟನ ಸಂಚಾಲಕರಾದ ಡಾ. ಬಸವರಾಜ ಧಾರವಾಡರವರನ್ನು ಶ್ರೀಕ್ಷೇತ್ರ ಮಂತ್ರಾಲಯದಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಶ್ರೀಕ್ಷೇತ್ರದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಆಶೀರ್ವದಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ, ಮಾಜಿ ಸಚಿವರಾದ ಆರ್.ವಿ. ದೇಶಪಾಂಡೆ, ಕೊಪ್ಪಳ ನಗರಸಭಾ ಮಾಜಿ ಸದಸ್ಯರಾದ ಪ್ರಾಣೇಶ ಮಾದಿಗನೂರ ಮುಂತಾದವರು ಉಪಸ್ಥಿತರಿದ್ದರು.